ಗಣಪತಿ, ವಿಶ್ವಂಭರ, ಏಕದಂತ, ವಕ್ರತುಂಡ, ಅಚಿಂತ್ಯ, ಹೇರಂಭ... ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುವ ವಿಘ್ನವಿನಾಶಕ ಗಣೇಶನ ಮಹಿಮೆ ಅಂತಿಂಥದ್ದಲ್ಲ. ಗಣೇಶನ ಮೇಲಿರುವ ರೋಚಕ ಪುರಾಣ ಕಥೆಗಳು ಮಕ್ಕಳಿಗಂತೂ ಬಹುಕುತೂಹಲಕಾರಿ. ಇಂಥ ಕಥೆಗಳ ಸಂಕಲನ ‘ಶ್ರೀ ಗಣೇಶ ಮಹಿಮೆ’ ಪುಸ್ತಕದಲ್ಲಿದೆ. ಮೊದಲಿಗೆ ‘ಶ್ರಿ ಗಜಾನನ ಸ್ತೋತ್ರ ಮತ್ತೆ ಗಣಪತಿಯ ಸ್ತೋತ್ರ, ‘ಗಣೇಶ ಚೌತಿ, ‘ಶ್ರೀ ಗಣೇಶ ಮಹಿಮೆ, ‘ಸ್ಯಮಂತಕೋಪಾಖ್ಯಾನ’ಈ ಭಾಗಗಳಿಂದ ಕೂಡಿರುವ ಪುಸ್ತಕದಿಂದ ಆಯ್ಕೆ ಮಾಡಿರುವ ಕೆಲ ಕಥೆಗಳ ಪ್ರಕಟಣೆ ಗಣೇಶ ಹಬ್ಬದ ಈ ಸಂದರ್ಭದಲ್ಲಿ ಪ್ರಚಲಿತವೂ ಹೌದು.

■ ನಾಗರಾಜು ನೀಲಕಂಠ ಜೋಯಿಸ್



# ಗಣಪತಿ ಬಪ್ಪ ಮೋರಯಾ...

‘ಗಣೇಶ ನಿನ್ನ ಮಹಿಮೆ ಅಪಾರ,
ಗಣೇಶ ನಿನ್ನ ಶಕ್ತಿ ಅಪಾರ...’

ಹಾಡು ಕೇಳಿದ್ದೀರಲ್ಲ? ಬಹುಶಃ ಗಣಪತಿಯ ಮೇಲಿರುವಷ್ಟು ಕಥೆಗಳು, ಹಾಡುಗಳು, ಕೀರ್ತನೆಗಳು ಬೇರೆ ಯಾವ ದೇವರ ಬಗ್ಗೆಯೂ ಇರಲಾರದು. ಪುರಂದರ ದಾಸರು ‘ನಾಟ’ ರಾಗದಲ್ಲಿ ಬರೆದಿರುವ ‘ವಂದಿಸುವುದಾದಿಯಲಿ ಗಣನಾಥನ’, ಹಂಸಧ್ವನಿ ರಾಗದಲ್ಲಿರುವ ‘ವಾತಾಪಿ ಗಣಪತಿಂ ಭಜೆ ಹಂ...’ ಕೀರ್ತನೆ ಅಷ್ಟೇ ಏಕೆ, ‘ಮುದಾಕರಾತ್ತ ಮೋದಕಂ ಸದಾವಿಮುಕ್ತಿ ಸಾಧಕಂ..’ ಎಂಬ ಗಣೇಶ ಪಂಚರತ್ನ, ಗಣೇಶನ ಮೇಲಿರುವ ಶ್ಲೋಕಗಳು ಎಲ್ಲವೂ ಸರ್ವವ್ಯಾಪಿಯಾಗಿರುವ ಗಣೇಶನ ಮಹಿಮೆಯನ್ನು ಕೊಂಡಾಡುವಂಥವೇ.

ಗಣೇಶನ ಹುಟ್ಟು ಹೇಗಾಯಿತು, ಗಣೇಶ ಏಕದಂತ ಆದದ್ದು ಹೇಗೆ?, ಡೊಳ್ಳು ಹೊಟ್ಟೆ ಗಣಪ ಹಾವನ್ನು ತನ್ನ ಉದರಕ್ಕೆ ಸುತ್ತಿಕೊಂಡದ್ದು ಏಕೆ? ಚೌತಿಯ ದಿನ ಚಂದ್ರನನ್ನು ನೋಡಬಾರದೇಕೆ... ಮುಂತಾದ ರೋಚಕ ಕಥಾನಕವನ್ನು ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಇಲ್ಲಿದೆ ಅಂಥ ಕೌತುಕದ ಕಥಾನಕದ ಸಂಕ್ಷಿಪ್ತ ರೂಪ.

## ಗಣಾಧಿಪತಿ ಆದುದು...

ಗಣೇಶ ಮಹಿಮೆ ಪುಸ್ತಕದಲ್ಲಿ ಮುಖ್ಯವಾದ ಕಥೆ ಹೀಗಿದೆ. ಜಗನ್ಮಾತೆಯಾದ ಪಾರ್ವತಿ ದೇವಿಯು ಒಮ್ಮೆ ಸ್ನಾನ ಗೃಹಕ್ಕೆ ಹೋಗುವ ಮುನ್ನ ತನ್ನ ಮೈಯೊಳಗಿಂದ ಹೊರಟ ಮಣ್ಣಿನಿಂದ ಒಂದು ಮೂರ್ತಿಯನ್ನು ಮಾಡಿ, ಅನಂತರ ಅದಕ್ಕೆ ಜೀವಕಳೆಯನ್ನು ತುಂಬಿಸಿದಳು. ಇದನ್ನು ಸ್ನಾನಗೃಹದ ಬಾಗಿಲಿಗೆ ಕಾವಲಾಗಿ ನಿಲ್ಲಿಸಿ ತಾನು ಸ್ನಾನ ಮಾಡತೊಡಗಿದಳು. ಹೋಗುವ ಮುನ್ನ ಯಾರು ಬಂದರೂ ಒಳಗೆ ಬಿಡಕೂಡದೆಂದು ಕಟ್ಟಪ್ಪಣೆ ವಿಧಿಸಿದ್ದಳು. ಪಾರ್ವತಿಯ ಆಜ್ಞೆಯಂತೆ ಆ ಕೊಳೆಯಿಂದ ಮಾಡಿದ, ಜೀವ ಹೊಂದಿದ ಮೂರ್ತಿಯು ಕಾವಲಾಗಿ ನಿಂತುಕೊಂಡಿದ್ದಿತು. ಪರಮೇಶ್ವರನು ಅಲ್ಲಿಗೆ ಬಂದನು. ಒಳಗೆ ಹೋಗಲೆತ್ನಿಸಿದಾಗ, ಕಾವಲುಗಾರ ತಡೆದು ನಿಲ್ಲಿಸಿತು.

ಬಹಳ ಕೋಪಗೊಂಡ ಶಿವನು ಅಲ್ಲಿ ಕಾವಲಿದ್ದ ಮೂರ್ತಿಯ ಶಿರವನ್ನು ಕತ್ತರಿಸಿ ಒಳಗೆ ಪ್ರವೇಶಿಸಿದನು. ತನ್ನಿಂದ ನಿರ್ಮಿತವಾದ ಒಂದು ಜೀವವು ಇಲ್ಲವಾದುದನ್ನು ಕಂಡು ಪಾರ್ವತೀದೇವಿಗೆ ಅತೀವ ದುಃಖವಾಯಿತು. ಕೂಡಲೇ ಅದನ್ನು ಬದುಕಿಸಿಕೊಡಬೇಕೆಂದು ಶಿವನಲ್ಲಿ ಪ್ರಾರ್ಥಿಸಿಕೊಂಡಳು. ಪರಮೇಶ್ವರನು ತನ್ನ ಪರಿವಾರದಲ್ಲಿರುವ ಗಣಂಗಳನ್ನು ಕರೆದು ನೀವು ಈಗಲೇ ಭೂಲೋಕಕ್ಕೆ ಹೋಗಿ, ಯಾರು ಉತ್ತರ ದಿಕ್ಕಿಗೆ ಮಲಗಿಕೊಂಡಿರುವರೋ ಅವರ